**OS.No.**15/2020
**ಪಿ ಡಬ್ಲ್ಯೂ: 1**

**ದಿಃ 14.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿಯ ಮೇಲೆ ಆದ ಆದೇಶದ ಮೇರೆಗೆ ಮುಂದುವರಿದ ಪಾಟೀ ಸವಾಲುಃ 1 ರಿಂದ 6 ನೇ ಪ್ರತಿವಾದಿ ಪರ ಶ್ರೀ ವೈ ಡಿ ಎಸ್ ವಕೀಲರಿಂದ**

ಈ ದಾವೆಯನ್ನು ಯಾವ ಆಸ್ತಿಗಳಿಗೆ ಮತ್ತು ಯಾರ ವಿರುದ್ದ ದಾಖಲಿಸಿದ್ದೇನೆ ಎಂದು ನನಗೆ ಗೊತ್ತು. ದಾವೆಯಲ್ಲಿ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತು. ನಾನು, ಪ್ರತಿವಾದಿಯರ ಜೊತೆ ಒಟ್ಟಿಗೆ ಅವಿಭಕ್ತ ಕುಟುಂಬದಲ್ಲಿ ವಾಸವಿದ್ದೆ. ಈಗ ನನ್ನನ್ನು ಬೇರೆ ಮಾಡಿರುತ್ತಾರೆ. ದಾವಾದ ಆಸ್ತಿಗಳ ಪಹಣಿಗಳು ನನ್ನ ಹೆಸರಿನಲ್ಲಿ ಇಲ್ಲ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರ ಹೆಸರಿನಲ್ಲಿ ಇರುವ ಆಸ್ತಿಗಳನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಎಲ್ಲಿಯೂ ಆಬಗ್ಗೆ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಸರಿ ಎಂದು ಉತ್ತರಿಸಿರುತ್ತಾರೆ. 400 ಕುರಿಗಳು ನನ್ನ ಅಜ್ಜನ ಕುರಿಗಳು ಇದ್ದು ಅವುಗಳನ್ನು ನಮ್ಮ ತಂದೆ ತೆಗೆದುಕೊಂಡಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ 1 ರಿಂದ 3 ನೇ ಪ್ರತಿವಾದಿಗಳು ಕುರಿಗಳನ್ನು ಖರೀದಿ ಮಾಡಿ ಅದರ ಸಂಪಾದನೆಯಿಂದ 400 ಕುರಿಗಳು ಇರುತ್ತವೆ ಎಂದು ಹೇಳಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. 133 ಕುರಿಗಳು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತವೆ ಎಂದು ಹೇಳಿದ್ದು ಆ ಪ್ರಕಾರ ಹಿಸ್ಸೆಯನ್ನು 15 ವರ್ಷಗಳ ಹಿಂದೆ ಮಾಡಿಕೊಂಡಿರುತ್ತಾರೆ. 133 ಕುರಿಗಳಲ್ಲಿ ಈಗ 300 ಕುರಿಗಳು ಆಗಿರುತ್ತವೆ. 133 ಕುರಿಗಳು ಎಂದು ಮಾತ್ರ ಹೇಳಿರುತ್ತೇನೆ ಎಂದರೆ ಈಗ ಬಹಳ ಕುರಿಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. 15 ವರ್ಷಗಳ ಹಿಂದೆ ಹಿಸ್ಸೆಯನ್ನು ಪಂಚಾಯಿತಿದಾರರು ಸೇರಿ ಮಾಡಿರುತ್ತಾರೆ. ದಾವಾದ ಆಸ್ತಿಗಳಲ್ಲಿ 1 ನೇ ಪ್ರತಿವಾದಿಯು ಒಟ್ಟು 6 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ನಮ್ಮ ಕುಟುಂಬಕ್ಕೆ ಒಟ್ಟು 16 ಎಕರೆ ಜಮೀನು ಇರುತ್ತದೆ. ಅದರಲ್ಲಿ 1 ನೇ ಪ್ರತಿವಾದಿ 6 ಎಕರೆ ಜಮೀನು ಸಾಗುವಳಿ ಮಾಡುತ್ತಿದ್ದಾರೆ. ಯಾವ ಯಾವ ಸ.ನಂಬರ್ ಗಳಲ್ಲಿ 1 ನೇ ಪ್ರತಿವಾದಿಯು ಎಷ್ಟು ಸಾಗುವಳಿ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಪೂರ್ಣಮ್ಮರವರಿಗೆ ಯಾವುದೇ ವಿಚ್ಛೇದನವನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ನಮ್ಮ ತಾಯಿಯು ಮೊದಲ ಹೆಂಡತಿ ಇದ್ದು ಅವರಿಗೆ ಆ ವಿಷಯ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯ ಜೊತೆ 1 ನೇ ಪ್ರತಿವಾದಿಯ ಜೊತೆ ಆಗಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಪೋಟೋ ಹಾಜರುಪಡಿಸಿದ್ದೇನೆ. ಅದೇ ರೀತಿ ವಿವಾಹ ಆಮಂತ್ರಣ ಪತ್ರಿಕೆ ಹಾಜರುಪಡಿಸಿದ್ದೇನೆ. ನಾನು 1 ನೇ ಪ್ರತಿವಾದಿಯ ಮಗ ಅಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.